ಅಹರ್ನಿಶಂ ಜಾಗರಣೀಯಂ ಲೋಕಹಿತಂ ಮಮ ಕರಣೀಯಂ

# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ



ನವದೆಹಲಿ: ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಹಾಗೂ ಸಹಸರಕಾರ್ಯವಾಹ ಡಾ. ಕೃಷ್ಣಗೋಪಾಲ್ ಅವರು ಭಾರತರತ್ನ ಪ್ರಶಸ್ತಿಗೆ ಭಾಜನರಾದ ಮಾನನೀಯ ಲಾಲಕೃಷ್ಣ ಅಡ್ವಾಣಿ ಅವರಿಗೆ ಗೌರವ ಸಲ್ಲಿಸಿದರು.

ಸಂಪುಟ : 46 | ಸಂಚಿಕೆ : 01 | ಚೈತ್ರ – ವೈಶಾಖ | ಕಲಿಯುಗಾಬ್ದ 5126 | 01–05–2024 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4

## ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿರಲಿ ಬೇಸಿಗೆ ರಜಾ ದಿನಗಳು

■ **ಮಯೂರಲಕ್ಷ್ಮೀ**



ಬಿರು ಬೇಸಿಗೆಯಲ್ಲಿ ವಸಂತ ಋತು ಹೊಸ ವರ್ಷದ ಕಂಪನ್ನು ಬೀರುತ್ತಾ ಆಗಮಿಸಿದೆ. ಶಾಲೆಗಳ ಚಟುವಟಿಕೆಗಳು ಮುಗಿದು ಈಗ ಮಕ್ಕಳ ಬಿಡುವಿನ ಬೇಸಿಗೆ ರಜೆಯ ಸಮಯ. ದೊರೆತ ಕಾಲಾವಕಾಶವನ್ನು ಸಮರ್ಪಕವಾಗಿ ಬಳಸಿಕೊಳ್ಳುವ ದೃಷ್ಟಿಯಿಂದ ಪೋಷಕರು ಗಮನವಹಿಸಿದರೆ ಬೇಸಿಗೆಯ ರಜಾ ದಿನಗಳು ಮಕ್ಕಳ ವ್ಯಕ್ತಿತ್ವ ವಿಕಸನಗೊಳಿಸುವ ಸುವರ್ಣ ದಿನಗಳಾಗಿ ಪಾತ್ರವಹಿಸುತ್ತದೆ.

**ಅದೊಂದಿತ್ತು ಕಾಲ:** ಸುಮಾರು 70–80 ದಶಕದಲ್ಲಿ ಬೇಸಿಗೆ ರಜೆ ಬಂದರೆ ಸಾಕು ಮಕ್ಕಳು ತಮ್ಮ ಅಜ್ಜ ಅಜ್ಜಿಯರನ್ನು ಅರಸುತ್ತಾ ಹಳ್ಳಿಗಳಿಗೆ ಹೋಗಿ ಅಲ್ಲಿನ ಪರಿಸರದಲ್ಲಿ ಲೀನವಾಗುತ್ತಿದ್ದರು. ಶುದ್ಧ ಆಹಾರ, ಗಿಡ ಮರಗಳು, ನೀರಿನ ಸೆಲೆ, ಬಾಲ್ಯ ಸ್ನೇಹಿತರು ಮತ್ತು ಪಠ್ಯಪುಸ್ತಕಗಳನ್ನು ಮರೆತು ಸ್ವಚ್ಛಂದವಾಗಿ ತೋಟಗಳಲ್ಲಿ ಆಟವಾಡುತ್ತಾ ಸಂಜೆ ಮನೆ ಸೇರುತ್ತಿದ್ದರು. ನಗರಗಳು ಅಥವಾ ಹಳ್ಳಿಗಳಲ್ಲಿ ಮನರಂಜನೆಯ ಸಾಧನಗಳು ವಿರಳವಾಗಿದ್ದು ಅಂದಿನ ಕಾಲದಲ್ಲಿ ಪ್ರಸಾರವಾಗುತ್ತಿದ್ದ ದೂರದರ್ಶನದ ಧಾರಾವಾಹಿಗಳು ಮತ್ತು ಚಿತ್ರಗೀತೆಗಳು ಎಲ್ಲರ ಮನಸಲ್ಲಿ ಅಚ್ಚಳಿಯದೇ ಉಳಿಯುತ್ತಿದ್ದವು. ಹಿರಿಯರಿಂದ ಕಥೆಗಳನ್ನು ಕೇಳುವುದು, ಅವರ ಜೀವನಾನುಭವದ ಘಟನೆಗಳನ್ನು ಅರಿಯುವುದು ಬೇಸಿಗೆಯ ರಜಾ ದಿನಗಳಲ್ಲಿ ಮಕ್ಕಳ ತೊಡಗಿಸುಕೊಳ್ಳುವಿಕೆಯ ಭಾಗವಾಗಿತ್ತು.

**ಇಂದಿದೆ ಅವಕಾಶಗಳ ಆಗರ:** ಪ್ರಸ್ತುತ ಪಾಲಕರಿಗೆ ತಮ್ಮ ಮಕ್ಕಳ ವ್ಯಕ್ತಿತ್ವ ವಿಕಸನಕ್ಕಾಗಿ ಸಹಾಯವಾಗಬಲ್ಲ ಹಲವಾರು ಚಟುವಟಿಕೆಗಳ ಅವಕಾಶಗಳಿವೆ. ಆಕರ್ಷಕ ಬೇಸಿಗೆ ಶಿಬಿರಗಳ ಪ್ರಮಾಣವೂ ಹೆಚ್ಚಾಗುತ್ತಿವೆ. ಬೇಸಿಗೆ ಶಿಬಿರಗಳಲ್ಲಿ ಯಥಾ ಪ್ರಕಾರ ಕೆಲವು ಚಟುವಟಿಕೆಗಳು, ಕ್ರೀಡೆ, ನೃತ್ಯ, ನಾಟಕ, ಸಂಗೀತ ಮತ್ತು ಚಿತ್ರಕಲೆ ಇತ್ಯಾದಿ ತರಬೇತಿ ನೀಡಲಾಗುತ್ತದೆ. ವಿಜ್ಞಾನಾಧಾರಿತ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್, ಡ್ರೋನ್ ಮುಂತಾದ ವಿಷಯಗಳನ್ನೊಳಗೊಂಡ ತರಬೇತಿ ಶಿಬಿರಗಳೂ ಇದ್ದು ಮಕ್ಕಳ ಕಲಿಕೆಗೆ ಪೂರಕವಾಗಬಲ್ಲದು. ಇದೆಲ್ಲರ ಹೊರತಾಗಿ ಅಂತರ್ಜಾಲದಿಂದ ವಿವಿಧ ವಿಚಾರಗಳ ಕುರಿತು ಮಾಹಿತಿ ಪಡೆದು ಆದರೆ ಉತ್ತಮ ಭವಿಷ್ಯವನ್ನು ರೂಪಿಸಿಕೊಳ್ಳಲು ಪೂರಕವಾಗುವಂತಹ ಅವಕಾಶಗಳಿವೆ.

**ಮಕ್ಕಳಿಗೆ ಸಮಯ ನೀಡಿ:** ಇಂದಿನ ಮಕ್ಕಳು ಅತ್ಯಂತ ಸೂಕ್ಷ್ಮ ಮನಸ್ಸಿನವರಾಗಿದ್ದು ಬಹಳ ಬೇಗ ಕಲಿಯುವ ಸಾಮರ್ಥ್ಯ ಉಳ್ಳವರು ಮತ್ತು ವೈಚಾರಿಕ ಮನೋಭಾವದಿಂದ ನಿರ್ಧಾರ ಕೈಗೊಳ್ಳಬಲ್ಲರು. ಇಂದಿನ ಅವಸರದ ಬದುಕಲ್ಲಿ ತಮ್ಮ ತಮ್ಮ ಕೆಲಸ ಕಾರ್ಯಗಳಲ್ಲಿ ತಲ್ಲೀನರಾಗುವ ಪಾಲಕರಿಗೆ ಮಕ್ಕಳನ್ನು ಗಮನಿಸಲು ಸಮಯವೇ ಇರುವುದಿಲ್ಲ. ಅನೇಕ ಬಾರಿ ಮಕ್ಕಳು ತಂದೆ ತಾಯಿಯೊಡನೆ ಸರಿಯಾಗಿ ಮಾತನಾಡಲೂ ಸಾಧ್ಯವಾಗುವುದಿಲ್ಲ. ಸಮಯದ ಸರಿಯಾದ ಉಪಯೋಗ ಪಡೆಯದಿದ್ದಲ್ಲಿ ಅನಗತ್ಯ ಚಟುವಟಿಕೆಗಳಲ್ಲಿ ಮಕ್ಕಳು ತೊಡಗಬಲ್ಲ ಆಪತ್ತು ಸದಾ ಇರುತ್ತದೆ. ಇದರ ಅರಿವು ಪಾಲಕರಿಗಿರಬೇಕು. ಮಕ್ಕಳ ಬೇಸಿಗೆ ರಜೆಯಲ್ಲಿ ಪಾಲಕರು ತಮ್ಮ ಅಲ್ಪ ಸಮಯವನ್ನಾದರೂ ಮಕ್ಕಳೊಡನೆ ಕಾಲ ಕಳೆಯಲು ಮೀಸಲಿಡಲೇಬೇಕು. ತಂದೆ ತಾನು ಹೇಗೆ ಬಾಲ್ಯದಿಂದ ಕಷ್ಟಪಟ್ಟು ವಿದ್ಯಾಭ್ಯಾಸಕ್ಕಾಗಿ ಅವರ ಪೋಷಕರು ಪಟ್ಟ ಶ್ರಮವನ್ನು ಸಾರ್ಥಕಗೊಳಿಸಲು ಶ್ರಮಿಸಿದ್ದನ್ನು ಉದಾಹರಣೆ ಸಹಿತ ವಿವರಿಸಬೇಕು. ಮಕ್ಕಳ ವ್ಯಕ್ತಿತ್ವ ರೂಪಿಸುವುದರಲ್ಲಿ ತಾಯಿಯ ಪಾತ್ರ ಅತ್ಯಂತ ಪ್ರಮುಖವಾದದ್ದು. ಬಾಲ್ಯದಲ್ಲಿ ತಾಯಿ ನೀಡಬಹುದಾದ ಉತ್ತಮ ಸಂಸ್ಕಾರ, ಹಿರಿಯರನ್ನು ಗೌರವಿಸುವ ರೀತಿ, ನೀತಿ ಕಥೆಗಳು ಮಕ್ಕಳನ್ನು ಉತ್ತಮರನ್ನಾಗಿಸುತ್ತದೆ. ವಿಶೇಷವಾಗಿ ಹೆಣ್ಣು ಮಕ್ಕಳಿಗೆ ಈ ದೇಶದಲ್ಲಿ ಅನಾದಿ ಕಾಲದಿಂದಲೂ ಸ್ವಾತಂತ್ರ್ಯ ಸಂಗ್ರಾಮದವರೆಗೂ ಹೇಗೆ ಮಹಿಳೆಯರು ಸಮರ್ಥ ನೇತೃತ್ವ, ಕರ್ತೃತ್ವ ಹಾಗೂ ಮಾತೃತ್ವದಿಂದ ಧರ್ಮರಕ್ಷಣೆಯ ಪಣ ತೊಟ್ಟರೆಂದು ತಿಳಿಸಬೇಕು.

**ಸೇವಾ ಚಟುವಟಿಕೆಗಳಲ್ಲಿ ಭಾಗಿ:** ಸಮಾಜದಲ್ಲಿ ನಡೆಯುವ ಸೇವಾ ಕಾರ್ಯಗಳಲ್ಲಿ ಪೋಷಕರೂ ಕೈಜೋಡಿಸಿ ಮಕ್ಕಳನ್ನೂ ಅಂತಹ ಕಾರ್ಯಗಳಲ್ಲಿ ತೊಡಗಿಸಬೇಕು. ಮಕ್ಕಳಿಂದಲೇ ಗಿಡ ನೆಡೆಸಿ ಮನೆಯ ಸುತ್ತ ಪುಟ್ಟ ಕೈತೋಟವನ್ನು ನಿರ್ಮಿಸಿಬೇಕು. ಇದರಿಂದ ನೆಲ ಜಲದ ಅರಿವು ಮೂಡುವುದಲ್ಲದೇ ಹಸಿರಿನ ಹಾಗೂ ನೀರನ್ನು ಸಂರಕ್ಷಿಸುವ ಮಹತ್ವವನ್ನು ಅವರು ಅರಿಯುತ್ತಾರೆ.

**ಪುಸ್ತಕದ ಓದನ್ನು ರೂಢಿ ಮಾಡಿಸಿ:** ಅಮೇರಿಕಾದಂತಹ ದೇಶಗಳಲ್ಲಿ ಮಕ್ಕಳು ತಂತ್ರಜ್ಞಾನದ ಸವಲತ್ತುಗಳಿಂದ ಈಗಾಗಲೇ ಬೇಸತ್ತಿದ್ದಾರೆ. ಅಲ್ಲಿನ ಶಾಲೆಗಳಲ್ಲಿ ಪಾಲಕರು ಪುಸ್ತಕ ಓದುವ ಹವ್ಯಾಸ, ಕೈತೋಟ ನಿರ್ಮಾಣ, ಸ್ವಚ್ಛತೆ ಮುಂತಾದ ವಿಷಯಗಳಿಗೆ ಗಮನ ಕೊಡುವಂತೆ ರಜೆಯ ಆರಂಭದಲ್ಲಿ ಸೂಚನೆ ನೀಡುತ್ತಾರೆ. ಮಕ್ಕಳೂ ಸಹಾ ಪೋಷಕರನ್ನು ರಜೆಯ ದಿನದಲ್ಲಿ ಅವರು ಹತ್ತಿರದ ಲೈಬ್ರರಿಗಳಿಗೆ ತಮ್ಮನ್ನು ಕರೆದೊಯ್ಯಬೇಕೆಂದು ಕೇಳಿಕೊಳ್ಳುತ್ತಾರೆ. ಪುಸ್ತಕಗಳನ್ನು ಓದುತ್ತಾ ದಿನವಿಡೀ ಸಮಯ ಕಳೆಯುವ ಹಂಬಲವನ್ನು ವ್ಯಕ್ತಪಡಿಸುತ್ತಾರೆ. ನಮ್ಮ ಮಕ್ಕಳಲ್ಲಿ ಪುಸ್ತಗಳನ್ನು ಓದುವ ಹವ್ಯಾಸ ಬರಬೇಕು. ಪಠ್ಯಕ್ರಮದ ಹೊರತಾಗಿ ನೈಜ ಇತಿಹಾಸವನ್ನು ಪುಸ್ತಕಗಳನ್ನು ಓದುವ ಮೂಲಕ ತಿಳಿಯಬೇಕು ಹಾಗೂ ಅ ಕುರಿತು ತಮ್ಮ ಸ್ನೇಹಿತರೊಂದಿಗೆ ಮಕ್ಕಳು ಚರ್ಚಿಸಬಹುದು. ರಾಮಾಯಣ ಮಹಾಭಾರತ ಕೇವಲ ಕಥನಗಳಲ್ಲಾ, ನಮ್ಮ ದೇಶದ ಇತಿಹಾಸದ ಭಾಗ ಎನ್ನುವುದನ್ನು ಅರಿಯಬೇಕು. ಹಲವಾರು ಪುರಾವೆಗಳು ಹಾಗೂ ಉತ್ಖನನಗಳು ಇದನ್ನು ಸಾಬೀತುಪಡಿಸಿದೆ.

**ಪ್ರಶ್ನಿಸುವ ಮನೋಭಾವ ಜಾಗೃತವಾಗಿಡಿ:** ಮಕ್ಕಳಲ್ಲಿ ಪ್ರಶ್ನಿಸುವ ಮನೋಭಾವವಿದೆ. ಅದಕ್ಕೆ ಸಮರ್ಥ ಉತ್ತರವನ್ನೂ ನಾವು ನೀಡಬೇಕು. ಉದಾಹರಣೆಗೆ ರಾಮನೇ ಏಕೆ ಆದರ್ಶ? ಶ್ರೀರಾಮನಿಗೆ ನಮ್ಮ ಭರತಭೂಮಿಯಲ್ಲೇಕೆ ಎಲ್ಲರ ಹೃದಯ ಸಿಂಹಾಸನದಲ್ಲಿ ಆರಾಧ್ಯ ದೈವ ಎನ್ನುವ ಸ್ಥಾನವಿದೆ ಎಂಬ ಪ್ರಶ್ನೆಗಳಿಗೆ ಪೌರಾಣಿಕ ಹಿನ್ನಲೆಯ ಹೊರತು ರಾಮಾಯಣದಲ್ಲಿರುವ ಹತ್ತು ಹಲವು ಸೂಕ್ಷ್ಮಗಳ ಅರಿವು ಮೂಡಿದಲ್ಲಿ ಮಕ್ಕಳು ರಾಮನನ್ನು ಪುರಾಣ ಪುರುಷನಲ್ಲದೆ ಆದರ್ಶಪುರುಷನನ್ನಾಗಿ ನೋಡುವ ಭಾವನೆ ಬರಬಹುದು. ಧರ್ಮಸಂಸ್ಥಾಪನೆಗಾಗಿ ಶ್ರೀಕೃಷ್ಣ ಪಣ ತೊಟ್ಟು ಕೊನೆಯವರೆಗೂ ಪಾಂಡವರ ರಕ್ಷಕನಾಗಿದ್ದು ಎಲ್ಲವನ್ನೂ ಕಳೆದುಕೊಂಡಿದ್ದ ಪಾಂಡವರು ಏಳು ಅಕ್ಷೋಹಿಣಿ ಸೈನ್ಯವನ್ನು ಪಡೆಯಲು ತನ್ನ ರಾಜಕೀಯ ಮುತ್ಸದ್ದಿತನದಿಂದ ಚತುರ ನಡೆ ನಡೆಸಲು ಪಾಂಡವರನ್ನು ಪ್ರೇರೇಪಿಸಿದ. ಮಹಾಭಾರತದಲ್ಲಿ ಬರುವ ಕಾಲಗಣನೆ ಸೇನೆಯ ವ್ಯೂಹ ರಚನೆ ಎಲ್ಲವೂ ವೈಜ್ಞಾನಿಕ ಹಾಗೂ ರೋಚಕ. ಋಷಿಗಳೆಂದರೆ ಕೇವಲ ಕಾಡಿನಲ್ಲಿ ಕುಳಿತು ತಪಸ್ಸು ಮಾಡಿ ಮನಸ್ಸು ಬಂದಾಗ ಶಾಪ ಕೊಡುತ್ತಿದ್ದರು ಎನ್ನುವ ಕಲ್ಪನೆಯನ್ನು ಹೋಗಲಾಡಿಸಬೇಕು. ವೇದಕಾಲದಿಂದಲೂ ಕಣ್ವ, ಕಣಾದ, ಅಗಸ್ತ್ಯ, ಚರಕ, ಸುಶ್ರುತ, ಬಾಗಭಟ್ಟ, ನಮ್ಮ ಋಷಿಮುನಿಗಳು ವಿಜ್ಞಾನ, ಗಣಿತ, ಖಗೋಳಶಾಸ್ತ್ರ, ಆಯುರ್ವೇದ, ವೃಕ್ಷವೇದ, ತಂತ್ರಜ್ಞಾನ ಮುಂತಾದ ಕ್ಷೇತ್ರಗಳಲ್ಲಿ ವಿಶ್ವಕ್ಕೆ ನೀಡಿರುವ ಕೊಡುಗೆಯನ್ನು ಅರಿಯಬೇಕು.

**ಮಹಾನ್ ಪುರುಷರನ್ನು ಪರಿಚಯಿಸಿ:** ರಾಷ್ಟ್ರದ ಸರ್ವಾಂಗೀಣ ಉನ್ನತಿಗಾಗಿ ಸಹಸ್ರಾರು ಸಂಖ್ಯೆಯಲ್ಲಿ ರಾಷ್ಟ್ರದ ಮಹಾನ್ ಪುರುಷರು ತಮ್ಮನ್ನು ತಾವು ಅರ್ಪಿಸಿಕೊಂಡಿದ್ದಾರೆ. ಅಂತಹ ಮಹಾನ್ ಪುರುಷರ ಕುರಿತು ತಿಳಿಸಿಕೊಡುವ ಪ್ರಯತ್ನವನ್ನು ಪೋಷಕರು ಮಾಡಬೇಕು. ಸ್ವಾತಂತ್ರ್ಯ ಹೋರಾಟಗಾರರ ಕಥನಗಳನ್ನು ತಿಳಿಸಬೇಕು. ನಮ್ಮ ದೇಶ ಭಾಗವಹಿಸಿದ ಯುದ್ಧಗಳಲ್ಲಿ ಹುತಾತ್ಮರಾದ ಸೈನಿಕರ ತ್ಯಾಗ ಅಮರ ಬಲಿದಾನವನ್ನು ನೆನೆಯಬೇಕು. ಅಂತಹ ಮಹಾತ್ಮರ ಜನ್ಮದಿನಗಳ ಮಹತ್ವವನ್ನರಿತು ಆಚರಿಸಬೇಕು. ಪ್ರತಿ ರಜೆಯಲ್ಲೂ ಮಕ್ಕಳೊಂದಿಗೆ ಪೋಷಕರು ಯಾವುದಾದರೂ ಒಂದು ಪ್ರವಾಸ ಕೈಗೊಳ್ಳಬೇಕು. ಆ ಪ್ರವಾಸೀ ತಾಣಗಳು ನಮ್ಮ ಪುರಾಣ, ಇತಿಹಾಸ ಹಾಗೂ ಪ್ರಾಚೀನ ಜ್ಞಾನದ ಭಂಡಾರವಾಗಿಹ ಪುಣ್ಯ ಕ್ಷೇತ್ರಗಳಂತಹ ತಾಣಗಳಾಗಿರಬೇಕು. ರಂಗಭೂಮಿ, ವಿಜ್ಞಾನ ತಾರಾಲಯ, ಆಹಾರ ಸಂರಕ್ಷಣಾ ಕೇಂದ್ರಗಳು, ಅನಾಥಾಲಯ ಮತ್ತು ಹಿರಿಯ ನಾಗರಿಕರನ್ನು ಪೋಷಿಸುವ ನಿಲಯಗಳನ್ನು ಭೇಟಿ ನೀಡಿ ಸಮಾಜದ ಹಲವು ರೀತಿಗಳನ್ನು ಪರಿಚಯಿಸಬೇಕು.

ಈ ಎಲ್ಲಾ ಪ್ರಮುಖ ವಿಚಾರಗಳನ್ನು ಒಳಗೊಂಡು ಮಕ್ಕಳಲ್ಲಿ ದೇಶಭಕ್ತಿ, ಸೇವಾ ಮನೋಭಾವ, ರಾಷ್ಟ್ರಹಿತ ಚಿಂತನೆಯೊಂದಿಗೆ ಅವರನ್ನು ಶಾರೀರಿಕವಾಗಿ, ಮಾನಸಿಕವಾಗಿ ಸದೃಢರನ್ನಾಗಿಸಿ ಬೌದ್ಧಿಕವಾಗಿ ಬಲಿಷ್ಠರನ್ನಾಗಿಸುವ ಸಂಘಟನೆಗಳು ನಡೆಸುವ ತರಬೇತಿ ಶಿಬಿರಗಳಲ್ಲಿ ಮಕ್ಕಳು ತರಬೇತಿ ಪಡೆಯಬಹುದು. ಅಲ್ಲಿ ಪಡೆಯುವ ತರಬೇತಿ ಭವಿಷ್ಯದಲ್ಲಿ ವಿಚಾರಶೀಲರನ್ನಾಗಿಸಿ ಸಕಾರಾತ್ಮಕ ಚಿಂತನೆಯೊಂದಿಗೆ ಶಿಸ್ತು, ಸಮಯ ಪರಿಪಾಲನೆ ಹಾಗೂ ಸ್ವತಂತ್ರ ಮನೋಭಾವವನ್ನು ಬೆಳೆಸುತ್ತದೆ. ಮಕ್ಕಳು ದೈಹಿಕವಾಗಿ, ಮಾನಸಿಕವಾಗಿ ಹಾಗೂ ಬೌದ್ಧಿಕವಾಗಿ ಸಶಕ್ತರಾಗುವಂತಹ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತೆ ಮಾಡಿದಲ್ಲಿ ಅವರ ವ್ಯಕ್ತಿತ್ವ ವಿಕಸನ ಸಾಧ್ಯ.

## ಸಂಸ್ಮರಣೆ

## ಮೇಜರ್ ಹೋಶಿಯಾರ್ ಸಿಂಗ್ ದಹಿಯಾ (5 ಮೇ 1936 – 6 ಡಿಸೆಂಬರ್ 1998)



ಆಗಿನ ಅವಿಭಜಿತ ಪಂಜಾಬ್‌ನ (ಈಗ ಸೋನೆಪತ್ ಜಿಲ್ಲೆ) ರೋಹ್ಟಕ್ ಜಿಲ್ಲೆಯ ಸಿಸಾನಾ ಗ್ರಾಮದಲ್ಲಿ 5 ಮೇ 1936 ರಂದು ಹೋಶಿಯಾರ್ ಸಿಂಗ್ ದಹಿಯಾ ಜನಿಸಿದರು. ತಮ್ಮ ಶಾಲಾ ಶಿಕ್ಷಣ ಹಾಗೂ ಜಾಟ್ ಕಾಲೇಜಿನಲ್ಲಿ ಒಂದು ವರ್ಷದ ಶಿಕ್ಷಣ ಪೂರೈಸಿದ ನಂತರ ಅವರು ಭಾರತೀಯ ಸೇನೆಗೆ ಸಿಪಾಯಿಯಾಗಿ ಸೇರಿದರು. ಜೂನ್ 1963ರಲ್ಲಿ ಅಧಿಕಾರಿಯಾಗಿ ನೇಮಕಗೊಂಡರು.

15 ಡಿಸೆಂಬರ್ 1971 ರಂದು, ಗ್ರೆನೇಡಿಯರ್ಸ್‌ನ ಬೆಟಾಲಿಯನ್‌ಗೆ ಶಕರ್‌ಗಢ ಸೆಕ್ಟರ್‌ನಲ್ಲಿ ಬಸಂತರ್ ನದಿಗೆ ಅಡ್ಡಲಾಗಿ ಸೇತುವೆಯನ್ನು ಸ್ಥಾಪಿಸುವ ಕಾರ್ಯವನ್ನು ನಿಯೋಜಿಸಲಾಯಿತು. ಲೆಫ್ಟ್ ಫಾರ್ವರ್ಡ್ ಕಂಪನಿಗೆ ಕಮಾಂಡರ್ ಆಗಿದ್ದ ಮೇಜರ್ ದಹಿಯಾ ಅವರಿಗೆ ಜರ್ಪಾಲ್‌ನಲ್ಲಿ ಶತ್ರು ಪ್ರದೇಶವನ್ನು ವಶಪಡಿಸಿಕೊಳ್ಳಲು ಆದೇಶಿಸಲಾಗಿತ್ತು. ಪಾಕಿಸ್ತಾನಿ ಪಡೆಗಳಿಂದ ಆವರಿಸಲ್ಪಟ್ಟಿದ್ದ ಈ ಸ್ಥಳವನ್ನು ವಶಪಡಿಸುವುದು ದೊಡ್ಡ ಸವಾಲಾಗಿತ್ತು. ದಾಳಿಯ ಸಮಯದಲ್ಲಿ, ದಹಿಯಾ ಕಂಪನಿಯು ಶತ್ರುಗಳ ಮಧ್ಯಮ ಮೆಷಿನ್ ಗನ್‌ಗಳಿಂದ ತೀವ್ರವಾದ ಶೆಲ್ ದಾಳಿ ಮತ್ತು ಕ್ರಾಸ್‌ಫೈರ್‌ಗೆ ಒಳಗಾಯಿತು. ಆದರೂ ದಹಿಯಾ ಧೈರ್ಯದಿಂದ ಅವರ ತಂಡವನ್ನು ಮುನ್ನಡೆಸಿ ತಮ್ಮ ಗುರಿಯನ್ನು ತಲುಪುವಲ್ಲಿ ಯಶಸ್ಸು ಕಾಣುತ್ತಾರೆ.

ಡಿಸೆಂಬರ್ 16ರಂದು ಶತ್ರುಸೇನೆ ಮೂರು ಪ್ರತಿದಾಳಿಗಳನ್ನು ಮಾಡಿದಾಗ ಮೇಜರ್ ಹೋಶಿಯಾರ್ ಸಿಂಗ್ ಎದೆಗುಂದದೆ, ಸೈನಿಕರನ್ನು ನಿಂತು ಹೋರಾಡಲು ಪ್ರೋತ್ಸಾಹಿಸಿ ವಿಜಯದ ನಗೆ ಬೀರಿದರು. ಆದರೆ ಮರುದಿನ, ಶತ್ರುಗಳು ಬೆಟಾಲಿಯನ್ನೊಂದಿಗೆ ಮತ್ತೊಂದು ದಾಳಿ ಮಾಡಿದರು. ಶತ್ರುಗಳ ಶೆಲ್ ದಾಳಿಯಿಂದ ಗಂಭೀರವಾಗಿ ಗಾಯಗೊಂಡಿದ್ದರೂ, ಮೇಜರ್ ಹೋಶಿಯಾರ್ ಸಿಂಗ್ ತಮ್ಮ ವೈಯಕ್ತಿಕ ಸುರಕ್ಷತೆಯನ್ನು ನಿರ್ಲಕ್ಷಿಸಿ ತೆರೆದ ಪ್ರದೇಶದಲ್ಲಿ ಚಲಿಸಿದರು ಮತ್ತು ಮೆಷಿನ್ ಗನ್ ಪಿಟ್‌ಗೆ ಧಾವಿಸಿ, ಗಂಭೀರವಾಗಿ ಗಾಯಗೊಂಡಿದ್ದರೂ, ಫೈರಿಂಗ್ ಮಾಡಿ ಶತ್ರು ಸೇನೆಯ 85 ಸೈನಿಕರನ್ನು ಸದೆಬಡಿದರು.

ಗಂಭೀರವಾಗಿ ಗಾಯಗೊಂಡಿದ್ದರೂ, ಮೇಜರ್ ಹೋಶಿಯಾರ್ ಸಿಂಗ್ ಕದನ ವಿರಾಮದವರೆಗೆ ಸ್ಥಳಾಂತರಿಸಲು ನಿರಾಕರಿಸಿದರು. ಈ ಕಾರ್ಯಾಚರಣೆಯ ಉದ್ದಕ್ಕೂ, ಮೇಜರ್ ಹೋಶಿಯಾರ್ ಸಿಂಗ್ ಅತ್ಯಂತ ಶೌರ್ಯ, ಅದಮ್ಯ ಹೋರಾಟದ ಮನೋಭಾವ ಮತ್ತು ನಾಯಕತ್ವವನ್ನು ಪ್ರದರ್ಶಿಸಿದರು.

1971ರ ಬಾಂಗ್ಲಾದೇಶ ವಿಮೋಚನಾ ಯುದ್ಧದ ಸಮಯದಲ್ಲಿ ಆ ಮೂರು ದಿನಗಳ ಸಾಹಸ ಮತ್ತು ಎದೆಗಾರಿಕೆಯು 85 ಪಾಕಿಸ್ತಾನಿ ಸೈನಿಕರ ಸಾವಿಗೆ ಕಾರಣವಾಯಿತು. ಹೀಗೆ ದಹಿಯಾ ದೇಶದ ಅತ್ಯುನ್ನತ ಶೌರ್ಯ ಪ್ರಶಸ್ತಿಯಾದ ಪರಮವೀರ ಚಕ್ರವನ್ನು ಪಡೆದ ಮೊದಲ ಜೀವಂತ ಅಧಿಕಾರಿ ಎಂಬ ಹೆಗ್ಗಳಿಕೆಗೆ ಪಾತ್ರರಾದರು.

## ಆಪತ್ಬಾಂಧವರು

ವಿಧಿಯ ಕೇವಲ ಒಂದೇ ಒಂದು ಹೊಡೆತ ಮಾನವನ ಎಲ್ಲವನ್ನೂ ನಷ್ಟ ಮಾಡಬಲ್ಲದು ಎನ್ನುವುದನ್ನು ಭೋಪಾಲದಲ್ಲಿ ನಡೆದ ಘಟನೆ ಸಾಕ್ಷೀಕರಿಸುತ್ತದೆ. ಪೈಸೆಗೆ ಪೈಸೆ ಒಟ್ಟುಗೂಡಿಸಿ ನಿರ್ಮಿಸಲಾಗಿದ್ದ ಜೋಪಡಿಗಳು ಒಂದೇ ಕ್ಷಣದಲ್ಲಿ ಭಸ್ಮವಾಯಿತು. 9 ಏಪ್ರಿಲ್ 2018ರ 12 ಗಂಟೆಗೆ ಸುಡುವ ಮಧ್ಯಾಹ್ನದಲ್ಲಿ ಭೋಪಾಲದ ಐಷಾರಾಮಿ ರಿಹಾಯಿಶ್ರಾ ಕೆತ್ ನಗರದ ಪಕ್ಕದ ಜೋಪಡಿಗಳಲ್ಲಿ ಭಯಾನಕವಾದ ಗ್ಯಾಸ್ ಸಿಲಿಂಡರ್ ಸ್ಫೋಟ ಸಂಭವಿಸುತ್ತದೆ. ಇದರಿಂದಾಗಿ ಉಂಟಾದ ಬೆಂಕಿಯು ಅಲ್ಲಿ ವಾಸಿಸುತ್ತಿದ್ದ ಅಸಹಾಯಕ ಜನರ ಕನಸುಗಳನ್ನು ಬೂದಿಯ ರಾಶಿಯಾಗಿ ಬದಲಾಯಿಸುತ್ತಿತ್ತು. ಇಂತಹ ಸಂದರ್ಭದಲ್ಲಿ ಒಂದು ಯುವಕರ ತಂಡ ಆಪತ್ಬಾಂಧವರಂತೆ ಅಲ್ಲಿಗೆ ಧಾವಿಸಿತ್ತು!

ಆಗ ಅಲ್ಲಿ ಆ ಅಸಹಾಯಕ ಜನರ ಹಾಗೂ ನಿರ್ದಯ ವಿಧಿಯ ನಡುವೆ ಗೋಡೆಯಾಗಿ ಯಾರಾದರೂ ನಿಂತಿದ್ದರೆ, ಅದು ಖಾಕಿ ಚಡ್ಡಿ ತೊಟ್ಟಿದ್ದ ಯುವ ಸ್ವಯಂಸೇವಕರಾಗಿದ್ದರು. ಅವರು ತಮ್ಮ ಸಾಹಸ ಹಾಗೂ ಸೇವಾಭಾವದಿಂದ ಈ ಸೇವಾಬಸ್ತಿಯ ಜನರ ಮೇಲೆ ಬಿದ್ದಿದ್ದ ವಿಧಿಯ ವಕ್ರ ದೃಷ್ಟಿಯ ಪರಿಣಾಮವನ್ನು ಕಡಿಮೆ ಮಾಡಲು ಸಾಧ್ಯವಿರುವ ಎಲ್ಲಾ ಪ್ರಯತ್ನವನ್ನೂ ಮಾಡಿದರು.

ಸ್ವಯಂಸೇವಕನೊಬ್ಬ ಸೇವಾಬಸ್ತಿಯವರನ್ನು ಬೆಂಕಿಯಿಂದ ಹೊರಗೆ ತರುವಲ್ಲಿ ಸಹಾಯ ಮಾಡುತ್ತಿದ್ದರೆ, ಇನ್ನೊಬ್ಬ ಡೇರೆಯ ವ್ಯವಸ್ಥೆಯಲ್ಲಿ ಸೇರಿಕೊಂಡಿದ್ದನು. ಮಧ್ಯಪ್ರದೇಶದ ರಾಜಧಾನಿ ಭೋಪಾಲದ ಸಾಕೇತ್ ನಗರದಲ್ಲಿ 25 ವರ್ಷದಿಂದ ಇರುವ ಈ ಜೋಪಡಿಯಲ್ಲಿ ಹತ್ತಿದ ಭೀಷಣ ಬೆಂಕಿಯಿಂದ ಒಟ್ಟು 31 ಜೋಪಡಿಗಳು ಹೊತ್ತಿ ಭಸ್ಮವಾದವು. ಪೀಡಿತರ ಸಹಾಯಕ್ಕಾಗಿ ಎಲ್ಲಕ್ಕಿಂತ ಮೊದಲು ತಲುಪಿದ ಸ್ವಯಂಸೇವಕರು ಬೆಂಕಿ ಹೊತ್ತಿದ ಕೆಲವೇ ಗಂಟೆಗಳಲ್ಲಿ ಅವರಿಗೆ ಬೇಕಾಗಿದ್ದ ಬಟ್ಟೆ ಹಾಗೂ ರಾತ್ರಿ ಊಟದ ವ್ಯವಸ್ಥೆಯನ್ನು ಮಾಡಿದರು. ಆಗ ಭೋಪಾಲದ ವಿಭಾಗ ಬೌದ್ಧಿಕ್ ಪ್ರಮುಖ್ ನಿತಿನ್ ಕೇಕರೆಯವರ ಪ್ರಕಾರ ಆಡಳಿತ ಸಿಬ್ಬಂದಿಯಿಂದ ಹಿಡಿದು ಮಂದಿರದ ಸಮಿತಿಯವರೆಗೆ ಸ್ವಯಂಸೇವಕರು ಎಲ್ಲರೊಂದಿಗೆ ಮಾತನಾಡಿ ಕೆಲವೇ ಗಂಟೆಗಳಲ್ಲಿ ಪೀಡಿತರಿಗಾಗಿ ಸಹಾಯವನ್ನು ಒಗ್ಗೂಡಿಸಿದರು.

ಅನೇಕ ವರ್ಷಗಳಿಂದ ತಮ್ಮ ಜೀವನೋಪಾಯಕ್ಕಾಗಿ ಸಣ್ಣ ಪುಟ್ಟ ಕೆಲಸಗಳಲ್ಲಿ ತೊಡಗಿದ್ದ ಯುವಕರು, ಮಹಿಳೆಯರಿಂದ ಹಿಡಿದು ಯುವಾವಸ್ಥೆಯಿಂದ ವೃದ್ಧಾಪ್ಯದವರೆಗೂ ಆ ಜೋಪಡಿಯಲ್ಲೇ ಜೀವನ ಕಳೆದ ಹಿರಿಯರು ಈ ಘಟನೆಯಿಂದಾಗಿ ತಲೆಯ ಮೇಲೆ ಕೈಹೊತ್ತು ವಿಧಿಯನ್ನು ದೂಷಿಸುತ್ತಿದ್ದರು. ಆದರೆ ಈ ಯುವಕರು ಅವರಿಗೆಲ್ಲಾ ಧೈರ್ಯ ತುಂಬಿ ಎರಡು ದಿನ ರಾತ್ರಿ ಹಗಲೆನ್ನದೆ ತಮ್ಮವರಂತೆ ಅವರ ಎಲ್ಲಾ ಅವಶ್ಯಕತೆಗಳನ್ನು ಪೂರ್ತಿಗೊಳಿಸುವಲ್ಲಿ ನಿರತರಾದರು. ಮೊದಲು ಇಲ್ಲಿಗೆ ಬಂದವರಲ್ಲಿ ಅಶ್ವಿನಿ ಚಡಾರ್, ಗೌರವ್ ಶುಕ್ಲ, ಕಾರ್ತಿಕ್ ವರ್ಮ, ಅಶುತೋಷ್ ನಾಮದೇವ್ ಹಾಗೂ ಅತುಲ್ ವಿಶ್ವಕರ್ಮ ಮೊದಲನೇ ದಿನ ಹೋಟೆಲಿನಿಂದ ಹಾಗೂ ಎರಡನೇ ದಿನ ಜೋಪಡಿಯ ಪಕ್ಕದ 2ಎ ಸೆಕ್ಟರ್‌ನ 150 ಕುಟುಂಬಗಳಿಂದ ಭೋಜನವನ್ನು ಸಂಗ್ರಹಿಸಿ ತಂದು ಹಂಚಿದರು. ಈ ಯುವಕರು ಉಚಿತ ವ್ಯವಸ್ಥೆಗಾಗಿ ಮಂದಿರದ ಸಮಿತಿ ಹಾಗೂ ಸೇವಾಭಾರತಿಯ ಕಾರ್ಯಕರ್ತರಿಂದ ಸಹಾಯವನ್ನು ಕೇಳಿದರು.



ಸೇವಾಭಾರತಿಯ ಮಂಡಲದ ಸಹೋದರಿಯರು ಮಕ್ಕಳಿಗಾಗಿ ಪುಸ್ತಕ ಹಾಗೂ ಅವಶ್ಯಕ ಸಾಮಗ್ರಿಗಳನ್ನು ಸಂಗ್ರಹಿಸಿದರು ಹಾಗೂ ಓದುವುದಕ್ಕಾಗಿ ಮಂದಿರಗಳಲ್ಲಿ ವ್ಯವಸ್ಥೆಯನ್ನು ಮಾಡಲಾಯಿತು. ಬೆಂಕಿ ಹತ್ತಿದ 24 ಗಂಟೆಯೊಳಗೆ ಸೇವಾಭಾರತಿಯ ಮೊಬೈಲ್ ಮೆಡಿಕಲ್ ವ್ಯಾನ್‌ನ ಡಾಕ್ಟರ್ ದಿನೇಶ್ ಶರ್ಮ ಹಾಗೂ ಡಾಕ್ಟರ್ ರಾಮ್ ಅವತಾರ್ ಯಾದವ್ ಸೇವಾಬಸ್ತಿಯ ಜನರ ವೈದ್ಯಕೀಯ ಪರೀಕ್ಷೆ ನಡೆಸಿ ಅವಶ್ಯಕ ಮದ್ದುಗಳನ್ನು ಕೊಟ್ಟರು. ಈಗ ಈ ಪೀಡಿತ ಕುಟುಂಬಗಳನ್ನು ಸರಕಾರವು ಒಂದು ಬಹುಮಹಡಿ ಕಟ್ಟಡಕ್ಕೆ ಸ್ಥಳಾಂತರಿಸಿದೆ. ಸಹಾಯ ಮಾಡುವ ಹಲವು ಸಂಸ್ಥೆಗಳು ಕೈಜೋಡಿಸಿವೆ ಹಾಗೂ ಸೇವಾ ಭಾರತಿಯ ಸಾಕೇತ್ ಮಂಡಲದ ಸಮಸ್ತ ಮಹಿಳೆಯರು ಹಾಗೂ ಪುರುಷರು ಸ್ವಯಂಸೇವಕರ ಸಹಯೋಗದಲ್ಲಿ ಎಲ್ಲರೊಂದಿಗೆ ಸಮನ್ವಯದಿಂದ ಅರ್ಹ ವ್ಯಕ್ತಿಗೆ ಅವಶ್ಯಕವಿರುವ ಎಲ್ಲ ವಸ್ತುಗಳನ್ನು ತಲುಪಿಸುವ ಜವಾಬ್ದಾರಿಯನ್ನು ಹೊತ್ತುಕೊಂಡಿದೆ.

## ಎಲ್ಲೋ ಕೇಳಿದ ಕಥೆ

### ಸೇವೆಯೇ ಶ್ರೇಷ್ಠ ಧರ್ಮ

2004ನೇ ಇಸವಿ ಡಿಸೆಂಬರ್ 26 ಒಂದು ಭಯಾನಕ ದಿನ. ನೂರಾರು ಮೀಟರ್ ಎತ್ತರದ ಸಮುದ್ರದ ರಕ್ಕಸ ಅಲೆಗಳು ತಮಿಳುನಾಡಿನ ಕರಾವಳಿಗೆ ಅಪ್ಪಳಿಸಿದವು. ಅಪಾರ ಜೀವ ಹಾನಿ ಸಂಭವಿಸಿತು. ಎಲ್ಲೆಲ್ಲೂ ತುಂಬಿಕೊಂಡ ಉಪ್ಪು ನೀರು. ಕೊಳೆತು ನಾರುತ್ತಿದ್ದ ಶವಗಳು, ಹಸಿವು, ರೋಗ ರುಜಿನ. ಒಟ್ಟಾರೆ ಆ ಸುನಾಮಿಯಿಂದ ಮನೆ ಮಾರು ಕಳೆದುಕೊಂಡ ಲಕ್ಷಾಂತರ ಜನರ ಬದುಕು ನರಕಮಯವಾಯಿತು. ದೇಶದ ಜನತೆ ನೊಂದ ಜನರ ನೋವಿಗೆ ಸ್ಪಂದಿಸಿತು. ಅವಶ್ಯ ವಸ್ತುಗಳ ಜೊತೆ ಸ್ವಯಂಸೇವಕರು ಸಂಘ ಸಂಸ್ಥೆಗಳು, ಮಠ ಮಂದಿರಗಳು ಸೈನ್ಯ ಸರಕಾರ ಎಲ್ಲರೂ ಪರಿಹಾರ ಕಾರ್ಯದಲ್ಲಿ ತೊಡಗಿದರು.

ಬೆಂಗಳೂರಿನ ಜಯನಗರದ ಅರಸು ಕಾಲೋನಿಯ ಒಂದು ಕೊಳಗೇರಿ. ಬಡತನ, ನಿರುದ್ಯೋಗ, ಕುಡಿತಗಳಿರುವ ವಸತಿ ಅದು. ಅಲ್ಲಿ ವಾಸಿಸುವ ಇಬ್ಬರು ಸೋದರಿಯರು ಚಂಪಾ ಹಾಗೂ ಇಂದಿರಾ ಸುನಾಮಿ ಮಾಡಿದ ಅನಾಹುತ ಹಾಗೂ ಅದರಲ್ಲಿ ಬದುಕುಳಿದವರ ಆಕ್ರಂದವನ್ನು ದೂರದರ್ಶನದಲ್ಲಿ ನೋಡಿದರು. ಆ ನಿರ್ಭಾಗ್ಯರ ಸೇವೆಗಾಗಿ ಏನಾದರೂ ಮಾಡಬೇಕೆಂದು ಆಗಲೇ ನಿರ್ಧರಿಸಿದರು. ಕಾಲೋನಿಯ ಜನರನ್ನೆಲ್ಲ ಒಟ್ಟುಗೂಡಿಸಿದರು. ಎಲ್ಲರೂ ತಮ್ಮಿಂದಾದಷ್ಟು ವಸ್ತು ಹಣ ಕೊಟ್ಟರು. 50 ಮಹಿಳೆಯರು ಅಲ್ಲಿನ ಗಲ್ಲಿಯೊಂದನ್ನೇ ಅಡುಗೆ ಮನೆ ಮಾಡಿದರು. ಬಾಡಿಗೆ ಒಲೆ ತಂದರು 50,000 ರೊಟ್ಟಿ ತಯಾರಿ ವಿಶ್ರಾಂತಿ ಇಲ್ಲದೆ ನಡೆಯಿತು. ಒಂದು ಲಾರಿ ತುಂಬುವಷ್ಟು ಆಹಾರ ಪೊಟ್ಟಣ ಮಾಡಿದರು. ಪ್ರತಿಯೊಂದುರಲ್ಲಿ ರೊಟ್ಟಿ, ಚಟ್ನಿ ಪುಡಿ, ಮಸಾಲೆ ಪುಡಿ, ಈರುಳ್ಳಿ, ಅಕ್ಕಿ, ಬೇಳೆ ಇಟ್ಟರು ಮತ್ತು ಪಾತ್ರೆಗಳನ್ನು ಜೊತೆಗೆ ಇಟ್ಟರು. ಮತ್ತೆ ಪಾತ್ರೆಗಳನ್ನು ಜೊತೆಗೆ ಇಟ್ಟರು. ಕಾಲೋನಿಯ 15 ಯುವಕರು ಲಾರಿಯಲ್ಲಿ ಸುನಾಮಿ ಪೀಡಿತ ಪ್ರದೇಶಕ್ಕೆ ಹೋಗಿ ಅವೆಲ್ಲವನ್ನು ವಿತರಣೆ ಮಾಡಿದರು ಕೇವಲ ಇಬ್ಬರು ಸೋದರಿಯರು ಆರಂಭಿಸಿದ ಈ ಪ್ರಯತ್ನ ಇಡೀ ಸಮುದಾಯದ ಕಾರ್ಯಕ್ರಮವಾಯಿತು.

## ಪುಸ್ತಕ ಪರಿಚಯ

### ಮಾವೋನಿಂದ ಮಹರ್ಷಿಯವರೆಗೆ

**ಲೇಖಕರು:** ಮಾಡಭೂಷಿ ಮದನ್ ಗೋಪಾಲ್  
**ಕನ್ನಡಕ್ಕೆ:** ಎಸ್ ಬಿ ರಂಗನಾಥ್  
**ಬೆಲೆ:** 400

ಕರ್ನಾಟಕ ಕಂಡ ದಕ್ಷ ಐಎಎಸ್ ಅಧಿಕಾರಿಗಳಲ್ಲಿ ಗಣ್ಯರು ಎಂ. ಮದನಗೋಪಾಲ್. ತಮ್ಮ ಪ್ರಾಮಾಣಿಕತೆ ಮತ್ತು ಜನಸಾಮಾನ್ಯರಿಗೆ ನ್ಯಾಯ ಒದಗಿಸುವ ಅದಮ್ಯ ಗುಣವಿಶೇಷದ ಕಾರಣಕ್ಕಾಗಿಯೇ ತಮ್ಮ ಸೇವಾವಧಿಯುದ್ದಕ್ಕೂ ಹಲವು ರೀತಿಯ ಬೆದರಿಕೆಗಳಿಗೆ, ನಿರಂತರ ವರ್ಗಾವಣೆಗಳಿಗೆ ಅವರು ತಲೆಕೊಡಬೇಕಾಗಿ ಬಂತು. ಅವರು ಅದನ್ನೆಲ್ಲ ದಿಟ್ಟತನದಿಂದ ಎದುರಿಸಿದರೇ ವಿನಾ ತಾವು ನಂಬಿದ ಮೌಲ್ಯಗಳೊಂದಿಗೆ ರಾಜಿ ಮಾಡಿಕೊಳ್ಳಲಿಲ್ಲ.

ಅಂಥ ಮದನಗೋಪಾಲ್ ಅವರ ಅಪೂರ್ವ ಕೃತಿ ಮಾವೋನಿಂದ_ ಮಹರ್ಷಿವರೆಗೆ. ಮೂಲತಃ ಆಂಧ್ರದ ನಕ್ಸಲ್ ಪ್ರದೇಶದಿಂದಲೇ ಬಂದಿದ್ದ ಅವರು ಮಾವೋವಾದಿ ಚಳವಳಿಯನ್ನು ಹತ್ತಿರದಿಂದ ಕಂಡವರು; ನೂರಾರು ಜನರನ್ನು ಹಿಂಸಾತ್ಮಕ ದಾರಿಗೆ ಎಳೆದ ಮಾವೋವಾದಿ ನಾಯಕರು ತಮ್ಮ ಕೊನೆಯ ದಿನಗಳಲ್ಲಿ ಏನಾದರು? – ಎಂಬುದನ್ನೂ ಸನಿಹದಿಂದ ಗಮನಿಸಿದವರು. ಅಲ್ಲಿ ಅವರು ಕಂಡುಂಡ ಸತ್ಯಗಳೇ ಈ ಕೃತಿಯಲ್ಲಿ ಅಕ್ಷರರೂಪ ಪಡೆದಿವೆ.




ಯಾವುದೋ ಭ್ರಮೆಗೆ ಒಳಗಾಗಿ ತಾವು ಹಿಂಸಾತ್ಮಕ ದಾರಿ ಹಿಡಿದದ್ದಲ್ಲದೆ ಮುಗ್ಧ ಯುವಕರನ್ನೂ ದಾರಿತಪ್ಪಿಸಿ, ಸಾವಿರಾರು ಜನಸಾಮಾನ್ಯರ ನೆಮ್ಮದಿಯನ್ನೂ ಬದುಕನ್ನೂ ಕಸಿದುಕೊಂಡ ನಕ್ಸಲ್ ನಾಯಕರು ತಾವು ಮಾತ್ರ ಕೊನೆಗೆ ನೆಮ್ಮದಿಗಾಗಿ ರಮಣಾಶ್ರಮದ ದಾರಿ ಹಿಡಿದದ್ದನ್ನು ಮದನಗೋಪಾಲ್ ಈ ಕೃತಿಯಲ್ಲಿ ವಿವರಿಸಿದ್ದಾರೆ.

ಪ್ರತಿಯೊಬ್ಬರೂ ಓದಬೇಕಾದ, ನಮ್ಮ ಸುತ್ತಮುತ್ತಲಿನ ಹದಿಹರೆಯದವರಿಗೆ ಓದಿಸಬೇಕಾದ ಮಹತ್ವದ ಕೃತಿ ಇದು.

ಪುಸ್ತಕದ ಪ್ರತಿಗಾಗಿ: 07483681708

ಸಂಪಾದಕೀಯ ಸಹಕಾರ: ಮಯೂರಲಕ್ಷ್ಮೀ, ಅರುಣ್ ಕಿರಿಮಂಜೇಶ್ವರ, ಶೈಲೇಶ್ ಕುಲಕರ್ಣಿ, ವಿನಯ್ ಕೃಷ್ಣ ಹೆಚ್.ವಿ., ಸಹನಾ ವಿಠಲ್‌ಕುಮಾರ್, ಸುಲಕ್ಷಣಾ ಶರ್ಮಾ

## ಅಮರನಾಥ ಯಾತ್ರೆಗೆ ನೋಂದಣಿ ಕಾರ್ಯ ಆರಂಭ



ಹಿಂದೂಗಳ ಪವಿತ್ರ ದೇವಾಲಯ ಅಮರನಾಥ ಯಾತ್ರೆಯ ನೋಂದಣಿ ಕಾರ್ಯ ಆರಂಭಗೊಂಡಿದೆ. ಪರವಾನಗಿ ಪಡೆಯಲು ಹೆಚ್ಚಿನ ಸಂಖ್ಯೆಯ ಬ್ಯಾಂಕ್ ಶಾಖೆಗಳಿಗೆ ತೆರಳಿ ನೋಂದಣಿ ನಡೆಸುತ್ತಿದ್ದಾರೆ. ದಕ್ಷಿಣ ಕಾಶ್ಮೀರದಲ್ಲಿರುವ 3,880 ಮೀಟರ್ ಎತ್ತರದ ಗುಹಾ ದೇಗುಲಕ್ಕೆ 52 ದಿನಗಳ ಯಾತ್ರೆಯು ಜೂನ್ 29 ರಂದು ಪ್ರಾರಂಭವಾಗಿ ಆಗಸ್ಟ್ 19 ರಂದು ಮುಕ್ತಾಯಗೊಳ್ಳಲಿದೆ ಎಂದು ಶ್ರೀ ಅಮರನಾಥ ದೇಗುಲ ಮಂಡಳಿ (SASB) ಪ್ರಕಟಣೆಯಲ್ಲಿ ತಿಳಿಸಿದೆ. ದಕ್ಷಿಣ ಕಾಶ್ಮೀರದ ಅನಂತನಾಗ್‌ನ ಪಹಲ್ಗಾಮ್ ಮೂಲಕ ಸಾಂಪ್ರದಾಯಿಕ 48–ಕಿಮೀ ಮಾರ್ಗದ ಮೂಲಕ ಅಮರನಾಥ ಯಾತ್ರೆಗೆ ತೆರಳಬಹುದು. ಮಾತ್ರವಲ್ಲದೇ ಮಧ್ಯ ಕಾಶ್ಮೀರದ ಗಂಡರ್‌ಬಾಲ್ ಜಿಲ್ಲೆಯ ಕಡಿದಾದ ಬಾಲ್ತಾಲ್ ಮಾರ್ಗ ಮೂಲಕ ಯಾತ್ರೆ ನಡೆಸಬಹುದು.

## ಉದ್ಯೋಗಿಗಳ ಭವಿಷ್ಯ ನಿಧಿ ನಿಯಮ ಬದಲು

ಇಪಿಎಫ್‌ಒ (ಉದ್ಯೋಗಿಗಳ ಭವಿಷ್ಯ ನಿಧಿ) ಸಂಸ್ಥೆಯ ವಾಸ್ತವಾಗಿ ಇಪಿಎಫ್‌ಒ ಫಾರ್ಮ್ 31ರ ಪ್ಯಾರಾ 68J ಅಡಿಯಲ್ಲಿ ಅಸ್ತಿತ್ವದಲ್ಲಿರುವ ಹಣ ಹಿಂಪಡೆಯುವಿಕೆಯ ಮಿತಿಯನ್ನು 50000 ರೂ. ರಿಂದ 1 ಲಕ್ಷಕ್ಕೆ ಹೆಚ್ಚಿಸಲಾಗಿದೆ. ಈ ಸಂಬಂಧ ಇಪಿಎಫ್‌ಒ ಏಪ್ರಿಲ್ 16 ರಂದು ಸುತ್ತೋಲೆ ಹೊರಡಿಸಿದೆ. ಪಿಂಚಣಿ ನಿಧಿ ಸಂಸ್ಥೆಯು ಏಪ್ರಿಲ್ 10, ರಂದು ಅಪ್ಲಿಕೇಶನ್ ಸಾಫ್ಟ್‌ವೇರ್‌ನಲ್ಲಿ ಬದಲಾವಣೆಗಳನ್ನು ಮಾಡಿದೆ. ಇದಕ್ಕೆ ಕೇಂದ್ರ ಭವಿಷ್ಯ ನಿಧಿ ಆಯುಕ್ತರಿಂದ ಈಗಾಗಲೇ ಗ್ರೀನ್ ಸಿಗ್ನಲ್ ಸಿಕ್ಕಿದೆ ಎಂದು ಇಪಿಎಫ್‌ಒ ಸುತ್ತೋಲೆ ಹೇಳಿದೆ. ಈ ಕ್ರಮವು ಇಪಿಎಫ್ ಚಂದಾದಾರರಿಗೆ ಆರೋಗ್ಯ ರಕ್ಷಣೆಯ ವೆಚ್ಚದ ಹೊರೆಯೊಂದಿಗೆ ಹೋರಾಡುವವರಿಗೆ ಅನುಕೂಲ ಮಾಡಿಕೊಡುತ್ತದೆ ಎಂದು ನಿರೀಕ್ಷಿಸಲಾಗಿದೆ. ವೈದ್ಯಕೀಯ ಚಿಕಿತ್ಸೆಗಾಗಿ ಸಾಮಾನ್ಯ ಜನರ ವೆಚ್ಚವನ್ನು ಪರಿಗಣಿಸಿ, ಅನೇಕ ಬ್ಯಾಂಕ್‌ಗಳು ಮತ್ತು ಫಿನ್‌ಟೆಕ್ ಕಂಪನಿಗಳು ಸಹ ವಿವಿಧ ಕ್ರಮಗಳನ್ನು ತೆಗೆದುಕೊಳ್ಳುತ್ತಿವೆ.

# ಸಾಲುದ್ದದ ಸುದ್ದಿಗಳು

## ನೌಕಾಪಡೆಯ ಮುಖ್ಯಸ್ಥರಾಗಿ ದಿನೇಶ್ ಕೆ. ತ್ರಿಪಾಠಿ ನೇಮಕ



ಭಾರತೀಯ ನೌಕಾಪಡೆಯ ಮುಂದಿನ ಮುಖ್ಯಸ್ಥರಾಗಿ ವೈಸ್ ಅಡ್ಮಿರಲ್ ದಿನೇಶ್ ಕೆ. ತ್ರಿಪಾಠಿ ಅವರನ್ನು ಕೇಂದ್ರ ಸರ್ಕಾರ ನೇಮಕ ಮಾಡಿದೆ. ಪ್ರಸ್ತುತ ನೌಕಾಪಡೆಯ ಮುಖ್ಯಸ್ಥ ಅಡ್ಮಿರಲ್ ಆರ್. ಹರಿಕುಮಾರ್ ಅವರು ಸೇವೆಯಿಂದ ನಿವೃತ್ತರಾದ ನಂತರ ದಿನೇಶ್ ತ್ರಿಪಾಠಿ ಅವರು ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಖಡಕ್‌ವಾಸ್ಲಾದ ಸೈನಿಕ್ ಸ್ಕೂಲ್ ರೇವಾ ಮತ್ತು ನ್ಯಾಷನಲ್ ಡಿಫೆನ್ಸ್ ಅಕಾಡೆಮಿಯ ಹಳೆಯ ವಿದ್ಯಾರ್ಥಿಯಾದ ಇವರನ್ನು 1985ರಲ್ಲಿ ಭಾರತೀಯ ನೌಕಾಪಡೆಯ ಕಾರ್ಯನಿರ್ವಾಹಕ ಶಾಖೆಗೆ ನಿಯೋಜಿಸಲಾಯಿತು.

## ಇವಿಎಂ ಬಗ್ಗೆ ಅನುಮಾನ ಬೇಡ: ಸುಪ್ರೀಂಕೋರ್ಟ್



ಎಲೆಕ್ಟ್ರಾನಿಕ್ ಮತಯಂತ್ರಗಳ (ಇವಿಎಂ) ಕುರಿತು ಪದೇ ಪದೇ ಅನುಮಾನ ವ್ಯಕ್ತವಾಗುತ್ತಿರುವುದಕ್ಕೆ ತೀವ್ರ ಬೇಸರ ವ್ಯಕ್ತಪಡಿಸಿರುವ ಸುಪ್ರೀಂಕೋರ್ಟ್ ಎಲ್ಲದರ ಬಗ್ಗೆಯೂ ಅನುಮಾನ ವ್ಯಕ್ತಪಡಿಸುವುದು ಸರಿಯಲ್ಲ. ಅತಿಯಾದ ಅನುಮಾನ ಕೂಡಾ ದೊಡ್ಡ ಜೊತೆಗೆ ಪದೇ ಪದೇ ಇಂಥ ನಿಲವು ವ್ಯಕ್ತಪಡಿಸಿದರೆ ಜನರಲ್ಲೂ ಗೊಂದಲ ಸೃಷ್ಟಿಯಾಗುತ್ತದೆ. ಚುನಾವಣಾ ಆಯೋಗ ಒಳ್ಳೆಯ ಕೆಲಸ ಮಾಡಿದಾಗ ಅದನ್ನು ಮೆಚ್ಚುವ ಕೆಲಸ ಮಾಡಿ ಎಂದು ಸಲಹೆ ನೀಡಿದೆ. ಇವಿಎಂ ಬದಲು ಮರಳಿ ಬ್ಯಾಲೆಟ್ ಪೇಪರ್ ಮತದಾನ ವ್ಯವಸ್ಥೆ ಜಾರಿ ಮಾಡಬೇಕು ಎಂದು ಕೋರಿ ಸಲ್ಲಿಸಲಾದ ಅರ್ಜಿ ವಿಚಾರಣೆ ವೇಳೆ ಈ ಸಲಹೆ ನೀಡಿದ ನ್ಯಾ.ಸಂಜೀವ್ ಖನ್ನಾ ಅವರನ್ನೊಳಗೊಂಡ ನ್ಯಾಯಪೀಠ, 'ಚುನಾವಣಾ ಪ್ರಕ್ರಿಯೆ ಪವಿತ್ರವಾದದ್ದು. ಅದರ ಪಾವಿತ್ರತೆ ಕಾಪಾಡಿ. ಯಾರಿಗೂ ಕೂಡ ಅವರ ನಿರೀಕ್ಷೆಯಂತೆ ಕೆಲಸ ನಡೆಯುತ್ತಿಲ್ಲ ಎನ್ನುವ ಆತಂಕವನ್ನು ಮೂಡಿಸಬೇಡಿ ಎಂದು ಸುಪ್ರೀಂಕೋರ್ಟ್ ತಿಳಿಸಿದೆ.

## ಭಾರತದಲ್ಲೇ ಬುಲೆಟ್ ರೈಲು ತಯಾರಿ



ಒಂದು ಗಂಟೆಗೆ 250 ಕಿ.ಮೀ.ಗಿಂತ ಹೆಚ್ಚು ವೇಗದಲ್ಲಿ ಪ್ರಯಾಣಿಸುವ ಸಾಮರ್ಥ್ಯದ ಬುಲೆಟ್ ರೈಲು ದೇಶೀಯವಾಗಿ ನಿರ್ಮಿಸುವ ಪ್ರಕ್ರಿಯೆಯನ್ನು ಭಾರತ ಆರಂಭಿಸಿದೆ. ಈ ರೈಲು ಸದ್ಯಕ್ಕೆ ಭಾರತೀಯ ರೈಲ್ವೆಯಲ್ಲಿರುವ ಯಾವುದೇ ರೈಲಿನ ವೇಗವನ್ನು ಮೀರುವ ಸಾಮರ್ಥ್ಯವನ್ನು ಹೊಂದಿರುತ್ತದೆ. ಚೆನ್ನೈನ ಇಂಟೆಗ್ರಲ್ ಕೋಚ್ ಫ್ಯಾಕ್ಟರಿ ಈ ರೈಲಿನ ವಿನ್ಯಾಸ ಸಿದ್ಧಪಡಿಸುತ್ತಿದೆ. ದೇಶೀಯ ತಂತ್ರಜ್ಞಾನ ಮತ್ತು ನಿರ್ಮಾಣವನ್ನು ಅದು ಒಳಗೊಂಡಿರುತ್ತದೆ. ಜಪಾನ್ ಅಂತಾರಾಷ್ಟ್ರೀಯ ಸಹಕಾರ ಸಂಸ್ಥೆ ಹಣಕಾಸು ಒದಗಿಸಿರುವ ಮುಂಬೈ–ಅಹಮದಾಬಾದ್ ಹೈ–ಸ್ಪೀಡ್ ರೈಲು ಯೋಜನೆ, ಈ ರೈಲು ಮಾರ್ಗದ ವೇದಿಕೆ (ಕಟ್ಟೆ) ಮತ್ತು ಭೂಸ್ವಾಧೀನ ಕೆಲಸವನ್ನು ಪೂರ್ಣಗೊಳಿಸಿದೆ.

## ಐಐಎಸ್‌ಇ ಯಿಂದ 'ದೀರ್ಘಾಯು ಭಾರತ' ಉಪಕ್ರಮ

ಭಾರತೀಯ ವಿಜ್ಞಾನ ಸಂಸ್ಥೆಯು 'ದೀರ್ಘಾಯು ಭಾರತ' ಉಪಕ್ರಮ ಯೋಜನೆಯನ್ನು ಘೋಷಿಸಿದೆ. ಈ ಯೋಜನೆಯಡಿ ಮಾನವನ ದೀರ್ಘಾವಧಿ ಆರೋಗ್ಯವನ್ನು ವೃದ್ಧಿಸುವುದು ಮತ್ತು ವಯಸ್ಸಿಗೆ ಸಂಬಂಧಿಸಿದ ಆರೋಗ್ಯ ಸವಾಲುಗಳನ್ನು ಬಗೆಹರಿಸುವ ಸಂಬಂಧ ಬೃಹತ್ ಪ್ರಮಾಣದಲ್ಲಿ ಕ್ಲಿನಿಕಲ್ ಪ್ರಯೋಗಗಳನ್ನು ನಡೆಸಲಾಗುವುದು. ಈ ಮೂಲಕ ಭಾರತೀಯರ ಆರೋಗ್ಯಪೂರ್ಣ ದೀರ್ಘಾಯು ಆಗಿಸುವ ನಿಟ್ಟಿನಲ್ಲಿ ಈ ಯೋಜನೆಯಡಿ ಕಾರ್ಯ ನಿರ್ವಹಿಸಲಾಗುವುದು. ಬೃಹತ್ ಪ್ರಮಾಣದಲ್ಲಿ ವೈದ್ಯಕೀಯ ಅಧ್ಯಯನ ಕೈಗೊಂಡು ಮೂಲಭೂತ ಮತ್ತು ಅನ್ವಯಿಕ ಸಂಶೋಧನೆಯ ಮೂಲಕ ವಯಸ್ಸಾಗುವಿಕೆಯನ್ನು ಅರ್ಥೈಸಿಕೊಳ್ಳಲಾಗುವುದು.

# ಪಿಯುಸಿ ಅನುತ್ತೀರ್ಣರಾಗಿದ್ದ ಕರುನಾಡಿನ ಶಾಂತಪ್ಪ ಯುಪಿಎಸ್‌ಸಿಯಲ್ಲಿ ಉತ್ತೀರ್ಣ

ಸಾಧನೆ ಎನ್ನುವುದು ಛಲಬಿಡದ ಪರಿಶ್ರಮಿಗಳ ಸ್ವತ್ತು ಎನ್ನುವುದನ್ನು ನಿರೂಪಿಸಿದ ಅನೇಕ ಘಟನಾವಳಿಗಳನ್ನು ನಾವು ಓದಿದ್ದೇವೆ, ಕಂಡಿದ್ದೇವೆ. ಆ ಸಾಲಿಗೆ ಸೇರುವ ಮತ್ತೊಂದು ನಿದರ್ಶನ ಇತ್ತೀಚೆಗೆ ಪ್ರಕಟಗೊಂಡ ನಾಗರಿಕ ಸೇವಾ ಪರೀಕ್ಷೆಗಳ ಫಲಿತಾಂಶದ ನಂತರ ದೊರೆತಿದೆ. ಜೀವನದಲ್ಲಿ ಶಿಕ್ಷಣ ಮುಖ್ಯ. ಪಡೆದ ಶಿಕ್ಷಣವನ್ನು ಅಂಕಗಳಿಂದ ಮಾತ್ರ ಅಳೆಯಲು ಸಾಧ್ಯವಿಲ್ಲ. ಮರಳಿ ಮರಳಿ ಮಾಡುವ ಪ್ರಯತ್ನದ ಮೂಲಕ ಜೀವನದಲ್ಲಿ ಯಶಸ್ಸನ್ನು ಗಳಿಸಬಹುದು ಎನ್ನುವುದನ್ನು ಈ ಉದಾಹರಣೆ ತಿಳಿಸಿದೆ. ತನ್ನ ಪದವಿಪೂರ್ವ ಶಿಕ್ಷಣದ ವಿದ್ಯಾಭ್ಯಾಸದ ಸಂದರ್ಭದಲ್ಲಿ ಎರಡೆರಡು ಬಾರಿ ಅನುತ್ತೀರ್ಣರಾಗಿದ್ದ ಕರ್ನಾಟಕದ ಬಳ್ಳಾರಿ ಮೂಲದ ಶಾಂತಪ್ಪ ಜಡೆಮ್ಮನವರ್ ರಾಷ್ಟ್ರದ ಅತ್ಯಂತ ಕ್ಲಿಷ್ಟಕರ ಪರೀಕ್ಷೆ ಎನಿಸಿದ ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ) ನಡೆಸುವ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ರಾಜ್ಯಕ್ಕೆ ಗರಿಮೆಯನ್ನು ತಂದಿದ್ದಾರೆ.

ಜೀವನದಲ್ಲಿ ಒಂದು ನಿರ್ದಿಷ್ಟ ಗುರಿ, ಸಾಧಿಸಬಲ್ಲೆನೆಂಬ ಛಲದೊಂದಿಗೆ ಮುನ್ನಡೆಯಿರಿ ಯಶಸ್ಸು ನಿಮ್ಮದಾಗುತ್ತದೆ ಎನ್ನುವ ನಾಣ್ಣುಡಿಯನ್ನು ಸತ್ಯವಾಗಿಸಿದ್ದಾರೆ ಶಾಂತಪ್ಪ. ಎರಡು ಬಾರಿ ಪಿಯುಸಿಯಲ್ಲಿ ಅನುತ್ತೀರ್ಣರಾಗಿದ್ದ ಶಾಂತಪ್ಪ ಅವರು ಧೃತಿಗೆಡದೆ, ಛಲ ಬಿಡದೆ ಸತತ ಪ್ರಯತ್ನ ಮಾಡಿ ಪಿಯುಸಿ ಶಿಕ್ಷಣ ಮತ್ತು ಪದವಿ ಶಿಕ್ಷಣವನ್ನು ಪಡೆದು ಉತ್ತೀರ್ಣರಾದರು. ಬಳಿಕ ಸ್ಪರ್ಧಾತ್ಮಕ ಪರೀಕ್ಷೆಗಳತ್ತ ಮನಸು ಮಾಡಿದ್ದರು. ಅನೇಕ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆದು ಇವರು ಕೊನೆಗೆ ಪಿಎಸ್‌ಐ ನೇಮಕಾತಿ ಪರೀಕ್ಷೆಯಲ್ಲಿ ಪಾಸ್ ಆಗಿದ್ದರು. ತಮ್ಮ ಸತತ ಪ್ರಯತ್ನದಿಂದ ಸಬ್‌ಇನ್ಸ್‌ಪೆಕ್ಟರ್ ಆಗಿದ್ದ ಶಾಂತಪ್ಪ ಅವರು ಇದೀಗ ಕನ್ನಡದಲ್ಲೇ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ. ಎಸ್‌ಎಸ್‌ಎಲ್‌ಸಿ, ಪಿಯುಸಿ ಹಾಗೂ ಇನ್ನಿತರ ಪರೀಕ್ಷೆಗಳಲ್ಲಿ ಕಡಿಮೆ ಅಂಕ ಪಡೆದಿದ್ದಕ್ಕಾಗಿ ಅಥವಾ ಅನುತ್ತೀರ್ಣಗೊಂಡಿದ್ದಕ್ಕಾಗಿ ತಪ್ಪು ನಿರ್ಧಾರಗಳನ್ನು ತೆಗೆದುಕೊಳ್ಳುವವರಿಗೆ ಇವರ ಜೀವನ ಪ್ರೇರಣೆಯಾಗುತ್ತದೆ.



ನಮ್ಮ ಕರ್ನಾಟಕದ ಶಾಂತಪ್ಪ ಜಡೆಮ್ಮನವರ್ ಕನ್ನಡದಲ್ಲೇ ಯುಪಿಎಸ್‌ಸಿ ಪರೀಕ್ಷೆ ಪಾಸ್ ಮಾಡುವ ಮೂಲಕ ಭಾಷೆಯ ಸಮಸ್ಯೆಯ ಕಾರಣದಿಂದಾಗಿ ಕೇಂದ್ರದ ಪರೀಕ್ಷೆಗಳನ್ನು ಬರೆಯುವುದಕ್ಕೆ ಹಿಂಜರಿಯುತ್ತಿದ್ದ ಪ್ರತಿಭಾವಂತ ಗ್ರಾಮೀಣ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಿದ್ದಾರೆ. ಕನ್ನಡ ಮಾಧ್ಯಮದಲ್ಲಿ ಪರೀಕ್ಷೆ ಬರೆದಿದ್ದ ಶಾಂತಪ್ಪ ಅವರು 644 ರ‍್ಯಾಂಕ್ ಪಡೆದು ಸಾಧನೆ ಮಾಡಿದ್ದಾರೆ. ಸದ್ಯ ಇವರು ಬೆಂಗಳೂರಿನ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಪಿಎಸ್‌ಐ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಶಾಂತಪ್ಪ ಜಡೆಮ್ಮನವರು ಪೊಲೀಸ್ ಇಲಾಖೆಯಲ್ಲಿಯೇ ಇದ್ದು ಮಾಡುತ್ತಿರುವ ಸಮಾಜ ಸೇವೆಗೆ ಪೊಲೀಸ್ ಇಲಾಖೆಯಲ್ಲಿ ಭಾರೀ ಪ್ರಶಂಸೆ ವ್ಯಕ್ತವಾಗುತ್ತಿದೆ.

# ಅರಣ್ಯ ರಕ್ಷಣೆ ನಾಗರಿಕರ ಕರ್ತವ್ಯ: ಸರ್ವೋಚ್ಚ ನ್ಯಾಯಾಲಯ

ಪರಿಸರ ರಕ್ಷಣೆ ಹಾಗೂ ಅರಣ್ಯಗಳು ಮತ್ತು ವನ್ಯಜೀವಿಗಳನ್ನು ಕಾಪಾಡುವುದರ ಕುರಿತಾದ ಸಂವಿಧಾನದ 48ಎ ವಿಧಿಯು, ನಾಗರಿಕರ ಜೀವಿಸುವ ಹಕ್ಕಿನ ಜತೆ ನೇರ ಸಂಪರ್ಕ ಹೊಂದಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ದೇಶದ ಸಂಪತ್ತನ್ನು ಅದು ಸಂಗ್ರಹಿಸುವ ಆದಾಯದ ಮೂಲಕ ಮಾತ್ರ ಅಳೆಯುವುದು ಸರಿಯಲ್ಲ. ಅದು ಸರ್ಕಾರ ರಕ್ಷಿಸಿದ ನೈಸರ್ಗಿಕ ಸಂಪತ್ತಿನ ಮೂಲಕವೂ ಗಣನೆಗೆ ಬರುತ್ತದೆ ಎಂದು ನ್ಯಾಯಪೀಠ ತಿಳಿಸಿದೆ. ಆಂಧ್ರ ಪ್ರದೇಶದ ವಾರಂಗಲ್ ಜಿಲ್ಲೆಯಲ್ಲಿನ ಕೊಂಪಲ್ಲಿ ಗ್ರಾಮದಲ್ಲಿ 1980ರ ದಶಕದಿಂದ ತನ್ನ ವೈಯಕ್ತಿಕ ಬಳಕೆಗಾಗಿ ಅರಣ್ಯ ಭೂಮಿಯನ್ನು ಪರಿವರ್ತಿಸಲು ಪ್ರಯತ್ನಿಸುತ್ತಿರುವ ಮೊಹಮದ್ ಅಬ್ದುಲ್ ಖಾಸಿಂ ಪ್ರಕರಣದಲ್ಲಿ ಮೂಕ ಪ್ರೇಕ್ಷಕರಂತೆ ಇದ್ದ ಸರ್ಕಾರಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ನ್ಯಾ ಎಂಎಂ ಸುಂದರೇಶ್ ಮತ್ತು ನ್ಯಾ ಎಸ್‌ವಿಎನ್ ಭಟ್ಟಿ ಅವರನ್ನು ಒಳಗೊಂಡ ನ್ಯಾಯಪೀಠ, ವಿರೋಧಾಭಾಸದ ನಿಲುವು ಪ್ರದರ್ಶಿಸಿದ ತೆಲಂಗಾಣ ಸರ್ಕಾರಕ್ಕೆ 5 ಲಕ್ಷ ರೂ. ದಂಡ ವಿಧಿಸಿದೆ.

ಅರಣ್ಯ ಭೂಮಿ ಮೇಲೆ ಖಾಸಿಂಗೆ ಯಾವುದೇ ಹಕ್ಕು ಇಲ್ಲ ಎಂದು ಈ ಆಂಧ್ರಪ್ರದೇಶ ಹೈಕೋರ್ಟ್ ತೀರ್ಪು ನೀಡಿತ್ತು. ಆದರೆ ರಾಜ್ಯ ವಿಭಜನೆ ಬಳಿಕ ಖಾಸಿಂ ಸಲ್ಲಿಸಿದ್ದ ತೀರ್ಪು ಮರುಪರಿಶೀಲನಾ ಅರ್ಜಿಯನ್ನು, ತೆಲಂಗಾಣ ಹೈಕೋರ್ಟ್ ನ್ಯಾಯಮೂರ್ತಿ ವಿಚಾರಣೆಗೆ ಸ್ವೀಕರಿಸಿದ್ದನ್ನು ಸುಪ್ರೀಂ ಕೋರ್ಟ್ ಟೀಕಿಸಿದೆ. ರಾಜ್ಯ ನೀತಿಯ ನಿರ್ದೇಶಿತ ತತ್ವಗಳನ್ನು ಸಂವಿಧಾನದ 48ಎ ಸ್ಪಷ್ಟವಾಗಿ ಸೂಚಿಸುತ್ತದೆ. ಹಾಗೆಯೇ 51ಎ (ಜಿ) ವಿಧಿಯು ಅರಣ್ಯಗಳು, ಸರೋವರ, ನದಿಗಳು ಮತ್ತು ವನ್ಯಜೀವಿ ಸೇರಿದಂತೆ ನೈಸರ್ಗಿಕ ಪರಿಸರವನ್ನು ರಕ್ಷಿಸುವ ಮತ್ತು ಸುಧಾರಿಸುವ ಹಾಗೂ ಇತರೆ ಸಹಜೀವಿಗಳ ಕಡೆ ಅನುಕಂಪ ತೋರುವ ನಾಗರಿಕರ ಕರ್ತವ್ಯಗಳನ್ನು ಪ್ರತಿಪಾದಿಸುತ್ತದೆ ಎಂದು ಕೋರ್ಟ್ ತಿಳಿಸಿದೆ. ಅರಣ್ಯಗಳ ರಕ್ಷಣೆ ನಾಗರಿಕರ ಕರ್ತವ್ಯ ಎನ್ನುವುದನ್ನು ಸೂಚಿಸಿದೆ.

पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 25th APRIL 2024
REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2024-2026 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2024-26
FORTNIGHTLY 01-05-2024



## ಅಯೋಧ್ಯೆಯ ರಾಮಮಂದಿರಕ್ಕೆ ಸುವರ್ಣ ರಾಮಚರಿತಮಾನಸ ಪುಸ್ತಕ ಅರ್ಪಣೆ



ಸುವರ್ಣಾಕ್ಷರಗಳಲ್ಲಿ ಬರೆಯುವ ಕಲ್ಪನೆಯು ಇನ್ನು ಮುಂದೆ ಕೇವಲ ಭಾಷಾವೈಶಿಷ್ಟ್ಯವಲ್ಲ, ಅಯೋಧ್ಯೆಯ ರಾಮಮಂದಿರದಲ್ಲಿ ಇದು ಸಾಕಾರಗೊಂಡಿದೆ. ತಾಮ್ರದ ತಗಡಿನ ಮೇಲೆ ಬಂಗಾರದ ಅಕ್ಷರಗಳಿಂದ ಬರೆದ ರಾಮಚರಿತಮಾನಸವನ್ನು ಮಂದಿರದ ಗರ್ಭಗೃಹದಲ್ಲಿ ಇರಿಸಲಾಗಿದೆ. ಈ ಪುಸ್ತಕ ಒಂದೂವರೆ ಕ್ವಿಂಟಾಲ್ ತೂಕವಿದ್ದು, ₹5 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದೆ.

ಮಧ್ಯಪ್ರದೇಶ ಕೇಡರ್‌ನ ನಿವೃತ್ತ ಐಎಎಸ್ ಅಧಿಕಾರಿ ಸುಬ್ರಹ್ಮಣ್ಯಂ ಲಕ್ಷ್ಮೀನಾರಾಯಣನ್ ಮತ್ತು ಅವರ ಪತ್ನಿ ಸರಸ್ವತಿ ಅವರು ಸುವರ್ಣಾಕ್ಷರ ರಾಮಾಯಣವನ್ನು ನಿರ್ಮಿಸಿ ರಾಮಲಲಾನ ಜನ್ಮದಿನಕ್ಕಾಗಿ ಉಡುಗೊರೆಯಾಗಿ ನೀಡಿದ್ದಾರೆ. ಅವರು ಬಹಳ ಸಮಯದಿಂದ ಇದನ್ನು ಸಿದ್ಧಪಡಿಸುವಲ್ಲಿ ನಿರತರಾಗಿದ್ದರು ಮತ್ತು ಅದನ್ನು ರಾಮ ನವಮಿಯ ಮೊದಲು ರಾಮಲಲಾಗೆ ಅರ್ಪಿಸಿದ್ದಾರೆ.

ಈ ನಿಟ್ಟಿನಲ್ಲಿ ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ಮತ್ತು ಇತರ ಸಂಬಂಧಪಟ್ಟವರನ್ನು ಹಲವು ಬಾರಿ ಭೇಟಿ ಮಾಡಿದ್ದರು. ಚೈತ್ರ ನವರಾತ್ರಿಯ ಮೊದಲ ದಿನವೇ ಸುವರ್ಣ ರಾಮಾಯಣ ರಾಮ ಮಂದಿರದ ಗರ್ಭಗೃಹ ತಲುಪಬೇಕು ಎಂಬುದು ಅವರ ಕೋರಿಕೆಯಾಗಿತ್ತು. ಅಂತಿಮವಾಗಿ ಅವರ ಕೋರಿಕೆಯನ್ನು ಟ್ರಸ್ಟ್ ಅಂಗೀಕರಿಸಿತು.

## ದೂರ ಸಂಪರ್ಕ ಜಾಲ ಪಡೆದುಕೊಂಡ ಭಾರತದ ಮೊದಲ ಗ್ರಾಮ

ಟೆಲಿಕಾಂ ಸಂಪರ್ಕವು ಭಾರತದ ಹಿಮಾಚಲ ಪ್ರದೇಶದ ಲಾಹೌಲ್ ಮತ್ತು ಸ್ಪಿತಿ ಜಿಲ್ಲೆಯ ಕೌರಿಕ್ ಮತ್ತು ಗುಯಾ ದೂರದ ಹಳ್ಳಿಗಳನ್ನು ತಲುಪಿದೆ. ಸಮುದ್ರ ಮಟ್ಟದಿಂದ 14,931 ಅಡಿ ಎತ್ತರದಲ್ಲಿರುವ ಈ ಗ್ರಾಮಗಳು ಈಗ ಡಿಜಿಟಲ್ ಯುಗಕ್ಕೆ ಸೇರಿಕೊಂಡಿದ್ದು, ಮೊಬೈಲ್ ಸಂಪರ್ಕವು ಭಾರತದ ಮೊದಲ ಗ್ರಾಮವನ್ನು ತಲುಪಿದೆ.

"ಟೆಲಿಕಾಂ ಸಂಪರ್ಕವು ಭಾರತದ ಮೊದಲ ಹಳ್ಳಿಯಾದ ಕೌರಿಕ್ ಮತ್ತು ಗುಯಾದಲ್ಲಿ ಸಮುದ್ರ ಮಟ್ಟದಿಂದ 14,931 ಅಡಿಗಳನ್ನು ತಲುಪಿದೆ. ಇದು ಹಿಮಾಚಲಪ್ರದೇಶದ ಲಹೌಲ್ ಮತ್ತು ಸ್ಪಿತಿ ಜಿಲ್ಲೆ. ಸಂಪರ್ಕವಿಲ್ಲದವರನ್ನು ಸಂಪರ್ಕಿಸುತ್ತದೆ" ಎಂದು ಭಾರತ ಸರ್ಕಾರದ ದೂರಸಂಪರ್ಕ ಇಲಾಖೆಯು ಟ್ವೀಟ್ ನಲ್ಲಿ ತಿಳಿಸಿದೆ.



## ಅಯೋಧ್ಯೆ ಬಾಲ ರಾಮನ ಹಣೆ ಬೆಳಗಿದ 'ಸೂರ್ಯ ತಿಲಕ'

ಅಯೋಧ್ಯೆ ರಾಮಮಂದಿರ ಏಪ್ರಿಲ್ 17, 2024ರಂದು ರಾಮನವಮಿಯ ದಿನ ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾಗಿದೆ. ರಾಮ ಮಂದಿರ ನಿರ್ಮಾಣವಾದ ನಂತರ ಇದೆ ಮೊದಲ ಬಾರಿ ಅಯೋಧ್ಯೆಯಲ್ಲಿ ರಾಮನವಮಿ ಆಚರಣೆ ನೆರವೇರಿದೆ. ಈ ಸಂದರ್ಭದಲ್ಲಿ ಬಾಲರಾಮನ ವಿಗ್ರಹದ ಹಣೆಯ ಮೇಲೆ ಸೂರ್ಯರಶ್ಮಿ ನೇರವಾಗಿ ಸ್ಪರ್ಶಿಸಿದೆ.

ಜನವರಿ 22, 2024ರಂದು ಮಂದಿರ ನಿರ್ಮಾಣವಾಗಿ ಬಾಲರಾಮನ ಪ್ರಾಣಪ್ರತಿಷ್ಠೆ ಅದ್ದೂರಿಯಾಗಿ ಸಂಪ್ರದಾಯಗಳೊಂದಿಗೆ ನೆರವೇರಿತ್ತು. ರಾಮಜನ್ಮಭೂಮಿ ಅಯೋಧ್ಯೆಯಲ್ಲಿ ರಾಮಲಲ್ಲಾ ಪ್ರಾಣಪ್ರತಿಷ್ಠಾಪನೆಯ ನಂತರ ಮೊದಲ ಬಾರಿಗೆ ರಾಮನವಮಿಯ ಆಚರಣೆ ನೆರವೇರಿತು. ಈ ಸಮಯದಲ್ಲಿ ವಿಶೇಷವಾಗಿ ರಾಷ್ಟ್ರದ ರಾಮಭಕ್ತರನ್ನು ಆಕರ್ಷಿಸಿದ್ದು ತಂತ್ರಜ್ಞಾನದ ಸಹಾಯದಿಂದ ಬಾಲರಾಮನ ಹಣೆಯನ್ನು ಬೆಳಗಿದ ಸೂರ್ಯರಶ್ಮಿ ತಿಲಕ.



ಕನ್ನಡಿಗಳು, ಮಸೂರಗಳನ್ನು ಬಳಸಿ ರೂಪಿಸಿರುವ ಯಾಂತ್ರಿಕ ವ್ಯವಸ್ಥೆ ಮೂಲಕ ಸಾಗಿದ ಸೂರ್ಯನ ಕಿರಣಗಳು, ಹಲವು ಬಾರಿ ಪ್ರತಿಫಲನಗೊಂಡು ಕೊನೆಗೆ ಬಾಲರಾಮನ ಹಣೆ ಮೇಲೆ ಬಿದ್ದ ಪರಿಯನ್ನು ಭಕ್ತರು ಕಣ್ಣುಂಬಿಕೊಂಡರು. 'ಬಾಲರಾಮನ ಮೂರ್ತಿಯ ಹಣೆ ಮೇಲೆ 4–5 ನಿಮಿಷಗಳ ಕಾಲ ಸೂರ್ಯರಶ್ಮಿಗಳು ಬಿದ್ದವು. ಆ ಮೂಲಕ 'ಸೂರ್ಯ ತಿಲಕ'ವನ್ನಿಟ್ಟ ವಿಧಿಯನ್ನೂ ನೆರವೇರಿಸಿದಂತಾಯಿತು. ಈ 'ಸೂರ್ಯ ತಿಲಕ'ದ ವಿನ್ಯಾಸವನ್ನು ರೂರ್ಕಿಯ ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಶೋಧನಾ ಪರಿಷತ್ತಿನ ಕೇಂದ್ರೀಯ ನಿರ್ಮಾಣ ಸಂಶೋಧನಾ ಸಂಸ್ಥೆ (ಸಿಎಸ್‌ಐಆರ್–ಸಿಬಿಆರ್‌ಐ) ಮಾಡಿದೆ. ಯೋಜಿಸಿದಂತೆಯೇ, ಮಧ್ಯಾಹ್ನ 12 ಗಂಟೆಗೆ ಬಾಲರಾಮನ ಮೂರ್ತಿಯ ಹಣೆ ಮೇಲೆ 'ಸೂರ್ಯ ತಿಲಕ' ಕಂಡುಬಂತು.

**ಬೆಂಗಳೂರು ವಿಜ್ಞಾನಿಗಳ ನೆರವು:** ಸೂರ್ಯ ಕಿರಣಗಳು ಬಾಲರಾಮನ ಮೂರ್ತಿಯ ಹಣೆ ಮೇಲೆ ಬೀಳುವಂತಹ ಯಾಂತ್ರಿಕ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ ಕಾರ್ಯಕ್ಕೆ ಸಿಎಸ್‌ಐಆರ್–ಸಿಬಿಆರ್‌ಐ ಜೊತೆ ಬೆಂಗಳೂರು ಮೂಲದ ಭಾರತೀಯ ಖಭೌತವಿಜ್ಞಾನ ಸಂಸ್ಥೆ (ಐಐಎ) ವಿಜ್ಞಾನಿಗಳು ಕೂಡ ಕೈಜೋಡಿಸಿದ್ದಾರೆ. ಈ ವ್ಯವಸ್ಥೆ ಮೂಲಕ 19 ವರ್ಷಗಳ ಕಾಲ ರಾಮ ನವಮಿಯಂದು ರಾಮ ಮಂದಿರದ ಮೂರನೇ ಮಹಡಿ ಮೂಲಕ ಹಾಯ್ದು ಹೋಗುವ ಸೂರ್ಯ ಕಿರಣಗಳು ಗರ್ಭ ಗೃಹದಲ್ಲಿರುವ ಬಾಲರಾಮನ ಮೂರ್ತಿಯ ಹಣೆಯನ್ನು ಸ್ಪರ್ಶಿಸಲಿವೆ. ಸೂರ್ಯಕಿರಣಗಳು ಗರ್ಭಗೃಹ ತಲುಪುವಂತೆ ಮಾಡಲು ಅಗತ್ಯವಿರುವ ಯಾಂತ್ರಿಕ ವ್ಯವಸ್ಥೆಯನ್ನು ಸಿಬಿಆರ್‌ಐ ಮಾಡಿದ್ದರೆ ಬೆಳಕಿನ ಕಿರಣಗಳ ಚಲನೆ ಪ್ರತಿಫಲನಕ್ಕೆ ಬೇಕಾದ ವ್ಯವಸ್ಥೆಯ ವಿನ್ಯಾಸವನ್ನು ಐಐಎ ಒದಗಿಸಿದೆ. 'ಪ್ರತಿ ವರ್ಷ ಚೈತ್ರ ಮಾಸದಲ್ಲಿ ರಾಮನವಮಿ ದಿನ ಸೂರ್ಯ ಕಿರಣಗಳು ಬಾಲ ರಾಮನ ಮೂರ್ತಿಯ ಹಣೆ ಸ್ಪರ್ಶಿಸಿ 'ಸೂರ್ಯ ತಿಲಕ' ಮೂಡಿಸುವ ವ್ಯವಸ್ಥೆಯೊಂದನ್ನು ವಿನ್ಯಾಸಗೊಳಿಸುವುದೇ ಯೋಜನೆಯ ಉದ್ದೇಶವಾಗಿತ್ತು. ಯೋಜನೆಯಂತೆ ಸೂರ್ಯ ಕಿರಣವು ರಾಮ ನವಮಿಯಂದೇ ಬಾಲರಾಮನ ಮೂರ್ತಿಯ ಹಣೆ ಮೇಲೆ ಬೀಳುವಂತೆ ಮಾಡಲಾಗಿದೆ.



**ಬೆಂಗಳೂರು:** ರಾಷ್ಟ್ರೀಯ ಸ್ವಯಂಸೇವಕ ಸಂಘ ಬೆಂಗಳೂರು ಮಹಾನಗರ ವತಿಯಿಂದ ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ ಪ್ರಯುಕ್ತ ಆಯೋಜಿಸಲಾದ ಉಪನ್ಯಾಸ ಕಾರ್ಯಕ್ರಮ ರಾಜಾಜಿನಗರದ ಕೆ.ಎಲ್.ಇ. ಶಾಲಾ ಸಭಾಂಗಣದಲ್ಲಿ ನಡೆಯಿತು. ಮಾಜಿ ವಿಧಾನ ಪರಿಷತ್ ಸದಸ್ಯ ಎನ್ ಮಹೇಶ್ ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಕರ್ನಾಟಕ ದಕ್ಷಿಣ ಪ್ರಾಂತ ಸಂಘಚಾಲಕ ಜಿ.ಎಸ್. ಉಮಾಪತಿ ಉಪಸ್ಥಿತರಿದ್ದರು.




**ಮಹಾರಾಷ್ಟ್ರ:** ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಡಾ. ಮೋಹನ್ ಭಾಗವತ್ ಅವರು ವಿವೇಕ್ ಸಾಪ್ತಾಹಿಕದ ವತಿಯಿಂದ ರಚಿಸಲಾಗಿರುವ 'ರಾಷ್ಟ್ರೀಯ ಸ್ವಯಂಸೇವಕ ಸಂಘ' ಎಂಬ ವಿಶೇಷ ಗ್ರಂಥವನ್ನು ನಾಗ್ಪುರದ ರೇಶಿಂಬಾಗ್‌ನ ಮಹರ್ಷಿ ವ್ಯಾಸ ಸಭಾಂಗಣದಲ್ಲಿ ಲೋಕಾರ್ಪಣೆಗೊಳಿಸಿ ಮಾತನಾಡಿದರು.



ನಾಗ್ಪುರ: ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಡಾ. ಮೋಹನ್ ಭಾಗವತ್ ಅವರು ಲೋಕಸಭಾ ಚುನಾವಣೆಯ ಮೊದಲ ಹಂತದ ಮತದಾನ ದಿನವಾದ ಎಪ್ರಿಲ್ 19, 2024ರಂದು ನಾಗ್ಪುರದ ತಮ್ಮ ಮತಗಟ್ಟೆಯಲ್ಲಿ ಮತದಾನವನ್ನು ಮಾಡಿದರು.

**ಓದುಗರೇ ಗಮನಿಸಿ**

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 87225 52497    ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.